# **ಕಾರ್ಮಿಕ ನ್ಯಾಯಾಲಯ, ಮೈಸೂರು.**

## **Ref**: 29/2021

ಡಬ್ಲ್ಯ್ಯೂ. ಡಬ್ಲ್ಯ್ಯೂ-1

**ದಿನಾಂಕ 16.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ರವರಿಂದ:**

ನರೇಂದ್ರ ಎನ್ನುವವರು 2 ನೇ ಪಕ್ಷಗಾರರ ಸಂಸ್ಥೆಯನ್ನು ಪ್ರಾರಂಭಿಸಿದ್ದರು ಎನ್ನುವುದು ನಿಜ. ಸದರಿ ನರೇಂದ್ರ ಎನ್ನುವವರು Rangsons Electronics ಸಂಸ್ಥೆಯನ್ನು 1992 ರಲ್ಲಿ ಪ್ರಾರಂಭಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯನ್ನು 2001 ರಲ್ಲಿ ಪ್ರಾರಂಭಿಸಿದ್ದರು ಎಂದು ನನಗೆ ಕೆಲಸಕ್ಕೆ ಸೇರಿಸಿಕೊಂಡ ನಂತರದಲ್ಲಿ ತಿಳಿದಿತ್ತು. ಸದರಿ ಸಂಸ್ಥೆಯ ಸುಮಾರು 800 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸ್ಪರ್ಧಾತ್ಮಕ ಮಾರುಕಟ್ಟೆಯ ಕಾರಣಕ್ಕೆ ಕೆಲಸಗಾರರನ್ನು ಕಡಿಮೆ ಮಾಡಿ 2014-15 ರಲ್ಲಿ 400 ಜನ ಕಾರ್ಮಿಕರು ಇದ್ದರು ಎನ್ನುವುದಕ್ಕೆ ಸಾಕ್ಷಿಯೂ 400 ಜನ ಕಾರ್ಮಿಕರು ಇದ್ದರು. ಆದರೇ ಯಾವ ಕಾರಣಕ್ಕೆ ಕೆಲಸಗಾರರ ಕಡಿತ ಆಗಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಂಸ್ಥೆಯನ್ನು ಪ್ರಾರಂಭಮಾಡಿದಾಗಿನಿಂದಲು 2017 ನೇ ಸಾಲಿನವರೆಗೂ ಆಡಳಿತ ಮಂಡಳಿಗೂ ಮತ್ತು ಕಾರ್ಮಿಕ ವರ್ಗಕ್ಕೂ ಅನ್ಯೋನ್ಯ ಸಂಬಂಧ ಇತ್ತು ಎನ್ನುವುದು ನಿಜ. ಸಾಕ್ಷಿ ಹೇಳುತ್ತಾರೆ. ವೇತನ ಮತ್ತು ಇತರೇ ಭತ್ಯೆಗಳನ್ನು ಸರಿಯಾದ ಸಮಯಕ್ಕೆ ಕೋಡದೇ ಇದ್ದರು ಕಾರ್ಮಿಕರು ತಮ್ಮ ಅನಿವಾರ್ಯತೆಗೆ ಯಾವುದೇ ತಕರಾರುಗಳನ್ನು ಮಾಡದೇ ಕೆಲಸವನ್ನು ಮಾಡುತ್ತಿದ್ದರು. ಕಾರ್ಮಿಕರು ತಮ್ಮ ಸಂಘವನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲು ಆಡಳಿತ ಮಂಡಳಿಯೂ ಕಾರ್ಮಿಕರ ವಿರುದ್ಧ ಯಾವುದೇ ಆಂತರಿಕ ವಿಚಾರಣೆಗಳನ್ನು, ತನಿಖೆಗಳನ್ನು ಮಾಡುವ ಪ್ರಸಂಗ ಬಂದಿರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ.

1 ನೇ ಪಕ್ಷಗಾರ ಸಂಘವು ಸಿ.ಐ.ಟಿ.ಯ್ಯೂ. ಸಂಘದ ಅಂಗ ಸಂಘ ಎನ್ನುವುದು ನನಗೆ ಗೊತ್ತಿಲ್ಲ. 2016 ನೇ ಸಾಲಿನಲ್ಲಿ Vinyas Innovative Technologies Workers Union ಸಂಘವನ್ನು ಪ್ರಾರಂಭಿಸಿದ್ದೇವು. 2 ನೇ ಪಕ್ಷಗಾರರ ಸಂಸ್ಥೆಯಲ್ಲಿ PCB Assemble and Full Assemble ಗಳನ್ನು ಉತ್ಪಾದಿಸುತ್ತಿದ್ದರು. 2010 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ Best Employer ಎಂಬ ಪ್ರಶಸ್ತಿಯನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯ ಉತ್ಪಾದನೆಯನ್ನು ಹೊರ ದೇಶಕ್ಕೆ ರಪ್ತನ್ನು ಮಾಡುವುದಲ್ಲದೇ ಭಾರತ ದೇಶದಲ್ಲಿಯೂ ಸಹ ಬಳಕೆ

ಮಾಡುತ್ತಾರೆ ಎನ್ನುವುದು ನಿಜ. Vinyas Innovative Technologies workers union ಕಾಯ್ದೆ ಅಡಿ ನೊಂದಣಿ ಮಾಡಿಸಿಕೊಂಡಿರುವುದಿಲ್ಲ. ಆದರೇ 1 ನೇ ಪಕ್ಷಗಾರ ಸಂಘದೊಂದಿಗೆ ಸಂಯೋಜನೆಗೊಂಡಿರುತ್ತೇವೆ. ನಮ್ಮ ಸಂಘಟದಲ್ಲಿ 350 ಜನಕ್ಕಿಂತ ಹೆಚ್ಚು ಕಾರ್ಮಿಕರು ಸದಸ್ಯರಾಗಿದ್ದಾರೆ. ನಮ್ಮ ಸಂಘಕ್ಕೆ ಸೇರಿಕೊಳ್ಳಲು ಇಷ್ಟ ಇಲ್ಲದ ಕಾರ್ಮಿಕರು ತಮ್ಮದೇ Welfare Association ನ್ನು ಮಾಡಿಕೊಂಡಿದ್ದರು ಎನ್ನುವುದು ಸುಳ್ಳು. ಸದರಿ Welfare Association ನ್ನು ನೊಂದಣಿ ಮಾಡಿಸಿಕೊಂಡಿದ್ದ ಅದರಲ್ಲಿ 183 ಜನ ಸದಸ್ಯರಿದ್ದರು ಎನ್ನುವುದು ಸುಳ್ಳು. Vinyas Innovative Technologies workers union ನ ಸದಸ್ಯರ ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸದರಿ ಸಂಘದಲ್ಲಿ ಇಂದಿನ ದಿವಸಕ್ಕೆ 150 ಜನ ಸದಸ್ಯರು ಇರುತ್ತಾರೆ. ನಾನು ಸದರಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿರುವುದರಿಂದ ಸಾಕ್ಷ್ಯವನ್ನು ಹೇಳುತ್ತಿದ್ದೇನೆ. ನನ್ನ ಪದಾಧಿಕಾರಿಯ ಹುದ್ದೆಯನ್ನು ತೋರಿಸಲು ಹಾಗೂ ಕಾರ್ಮಿಕರುಗಳ ಸದಸ್ಯತ್ವವನ್ನು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುತ್ತದೆ. ಸಾಕ್ಷಿ ಮತ್ತೆ ಹೇಳುತ್ತಾರೆ. ನನ್ನ ಹುದ್ದೆಯ ದಾಖಲೆಯನ್ನು ಕೊಡಲು ತೊಂದರೆ ಇರುವುದಿಲ್ಲ. ಆದರೇ 150 ಕಾರ್ಮಿಕರ ಸದಸ್ಯತ್ವದ ದಾಖಲೆಯ ಪಟ್ಟಿಯನ್ನು ಹಾಜರುಪಡಿಸಲು ಆಗುವುದಿಲ್ಲ ಎನ್ನುತ್ತಾರೆ. ನಮ್ಮ ಸಂಘದ ಬೈಲಾ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲು ತೊಂದರೆ ಇರುವುದಿಲ್ಲ. ಸದಸ್ಯರ ಸದಸ್ಯತ್ವದ ವಂತಿಗೆಯನ್ನು ಸಂಘಕ್ಕೆ ಕಟ್ಟಲು ಬೈಲಾ ಪ್ರಕಾರ ನಿಯಮ ಇದೆ. ಇಂದಿಗೂ ಸದಸ್ಯರು ಸಂಘಟಕ್ಕೆ ಸದಸ್ಯತ್ವದ ವಂತಿಗೆಯನ್ನು ಕಟ್ಟುತ್ತಿದ್ದಾರೆ ಎಂಬುದನ್ನು ತೋರಿಸಲು ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನಗೆ ಈ ಪ್ರಕರಣದಲಿ ಸಾಕ್ಷಿಯನ್ನು ಹೇಳಲು ಸಂಘದಲ್ಲಿ Resolution ನ್ನು ಮಾಡಲಾಗಿದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ಈ ಸಮಯದಲ್ಲಿ ಶ್ರೀ.ಜೆ.ಪಿ ಅವರು ಸಾಕ್ಷಿಯ ಮುಂದಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಆಲಿಸಿ ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

Sd/-

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**